**ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಆನೇಕಲ್.**

| | |
|---|---|
| **ಸಿ.ಸಿ. ನಂ** | **20615/2021** |
| **ಪಿ.ಡಬ್ಲ್ಯೂ** | **01** |
| **ದಿನಾಂಕ** | **06.04.2026** |

**ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು : ಆರೋಪಿ ಪರ ಶ್ರೀ. ಎಸ್.ಪಿ. ವಕೀಲರಿಂದ**

ನಮಗೆ ಬಾಡಿಗೆ ಬರುವ ಮನೆ ನನ್ನ ಗಂಡನ ಹೆಸರಿನಲ್ಲಿ ಇದೆ. ಆ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ. ನಮಗೆ ಬಾಡಿಗೆ ರೂ.80,000/- ಬರುತ್ತದೆ ಎಂಬುದಕ್ಕೆ ದಾಖಲೆ ನ್ಯಾಯಾಲಯಕ್ಕೆ ಕೊಟ್ಟಿಲ್ಲ ಎಂದರೆ ಸರಿ. ನನ್ನ ಗಂಡ ನನ್ನ ಜೊತೆಯಲ್ಲಿ ವಾಸವಿಲ್ಲ ಎಂದರೆ ಸರಿಯಲ್ಲ.

ನಾನು ವೆಂಕಟೇಶ್ ಎಂಬುವವರ ಮೇಲೆ ಈ ಪ್ರಕರಣ ಮಾಡಿದ್ದೇನೆ. ನಾನು ಕೊಟ್ಟ ಹಣ ವಾಪಸ್ಸು ಕೊಡವ ಬಗ್ಗೆ ಈ ಪ್ರಕರಣ ಮಾಡಿರುತ್ತೇನೆ. ದಿನಾಂಕಃ 27.07.2018 ರಲ್ಲಿ ನಾನು ಆರೋಪಿಗೆ ರೂ.6,00,000/- ಸಾಲವನ್ನು ನಗದು ರೂಪದಲ್ಲಿ ನಮ್ಮ ಮನೆಯಲ್ಲಿ ಕೊಟ್ಟಿರುತ್ತೇನೆ. ಸಾಲ ಕೊಡುವ ಸಮಯದಲ್ಲಿ ನನ್ನ ಮಗಳು ಹಾಗೂ ನಮ್ಮ ಪಕ್ಕದ ಮನೆಯ ಶಿವಶಂಕರ್ ಎಂಬುವವರು ಇದ್ದರು. ಆರೋಪಿಗೆ ಸಾಲ ಕೊಡುವ ದಿನ ನಾನು ಮನೆಯಲ್ಲಿ ನಗದು ಹಣ ಇಟ್ಟುಕೊಂಡಿದ್ದೆನು. ನಿಪಿ-9 ರಲ್ಲಿ ಪದ್ಮಾ ಎಂಬುವವರು ಸಾಲ ಪಡೆದುಕೊಂಡರು ಎಂದು ಇದೆ ಎಂದರೆ ಸಾಕ್ಷಿ ಅವರೊಂದಿಗೆ ಆರೋಪಿಯೂ ಸಹ ಬಂದಿದ್ದರು ಎಂದು ನುಡಿದಿರುತ್ತಾರೆ. ನಿಪಿ-9 ರಲ್ಲಿ ಆರೋಪಿಯ ಹೆಸರು ಇಲ್ಲ ಎಂದರೆ ಸರಿಯಲ್ಲ. ನಿಪಿ-9 ರಲ್ಲಿ ಕಾಣಿಸಿರುವ ಆಸ್ತಿ ಪದ್ಮಾರವರು ಕೊಂಡುಕೊಂಡಿರುವ ಆಸ್ತಿ ಎಂದರೆ ನನಗೆ ಗೊತ್ತಿಲ್ಲ. ನಿಪಿ-9 ಯಾವ ದಿನಾಂಕದಂದು ಬರೆಸಿದ್ದಾರೆ ಎಂದರೆ ದಿನಾಂಕಃ 27.07.2018. ನಿಪಿ-9 ರಲ್ಲಿ ಕಾಣಿಸಿರುವ ಆಸ್ತಿ ಅದೇ ದಿನ ನಮಗೆ ಬಿಟ್ಟುಕೊಟ್ಟಿದ್ದಾರೆಂದು ಬರೆದಿದ್ದಾರೆ ಎಂದರೆ ಗೊತ್ತಿಲ್ಲ. ನಿಪಿ-9 ಕ್ಕೆ ನಾನು ಸಹಿ ಮಾಡಿದ್ದೇನೆ ಎಂದರೆ ಸರಿ. ನಿಪಿ-9 ರಲ್ಲಿ ಕಲ್ಕೆರೆ ಶಾಖೆಯ ಯೂನಿಯನ್ ಬ್ಯಾಂಕ್ ನ ಎರಡು ಚೆಕ್ಕುಗಳನ್ನು ಭದ್ರತೆಗಾಗಿ ಕೊಟ್ಟಿರುತ್ತೇನೆ ಎಂದು ಬರೆಯಲಾಗಿದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಒಂದು ಕಲ್ಕೆರೆ ಶಾಖೆಯ ಬ್ಯಾಂಕ್ ಚೆಕ್ ಹಾಗೂ ಇನ್ನೊಂದು ಮಲ್ಲೇಶ್ವರಂನ ಕಾರ್ಪೋರೇಷನ್ ಶಾಖೆಯ ಒಂದು ಚೆಕ್ಕು ಎಂದು ನುಡಿದಿರುತ್ತಾರೆ.

ನಿಪಿ-1 ಮತ್ತು 2 ಚೆಕ್ಕುಗಳನ್ನು ದಿನಾಂಕಃ 22.02.2021 ಹಾಗೂ 01.03.2021 ರಂದು ಕೊಟ್ಟಿರುತ್ತಾರೆ. ನಿಪಿ-1 ಮತ್ತು 2 ರಲ್ಲಿರುವ ಚೆಕ್ ಸಂಖ್ಯೆ ನಿಪಿ-9 ರಲ್ಲಿ ಬರೆದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಆರೋಪಿಯೇ ಬರೆಸಿಕೊಂಡು ಬಂದಿರುತ್ತಾರೆ ಎಂದು ನುಡಿದಿರುತ್ತಾರೆ. ನಿಪಿ-9 ರಲ್ಲಿ ಶಿವಶಂಕರ್ ಹಾಗೂ ನನ್ನ ಮಗಳು ದ್ರಾಕ್ಷಾಯಿಣಿ ಸಹಿ ಮಾಡಿರುತ್ತಾರೆ. ಸಹಿ ಮಾಡುವ ಮುನ್ನ ನನ್ನ ಮಗಳು ನಿಪಿ-9 ಅನ್ನು ಓದಿರುತ್ತಾರೆ. ನಿಪಿ-9 ರಲ್ಲಿ ಬಡ್ಡಿ ಕೊಡಬೇಕು ಎಂದು ಬರೆಸಿದ್ದೇವೆ ಎಂದರೆ ಗೊತ್ತಿಲ್ಲ.

ಭಾಗ್ಯಮ್ಮ ನವರು ನನ್ನ ಅಕ್ಕ. ನಾವಿಬ್ಬರು ಒಂದೇ ಬ್ಯಾಂಕ್ ನಲ್ಲಿ ಖಾತೆ ತೆರೆದಿದ್ದೇವೆ ಎಂದರೆ ಸರಿ. ಸದರಿ ಭಾಗ್ಯಮ್ಮ ನನ್ನ ಜೊತೆಯಲ್ಲಿಯೇ ಸುಮಾರು 10 ವರ್ಷಗಳಿಂದ ವಾಸವಿದ್ದಾರೆ. ಭಾಗ್ಯಮ್ಮ ಎಂಬುವವರು ಸುರಗಜಕ್ಕನಹಳ್ಳಿಯಲ್ಲಿ ವಾಸವಿಲ್ಲ ಎಂದರೆ ಸರಿ.

**(ಮುಂದುವರೆದ ವಾಟೀ ಸವಾಲಿಗೆ ಕಾಲಾವಕಾಶ ಕೇಳಲಾಗಿ, ಸಮಯ ನೀಡಿ ಮುಂದೂಡಲಾಯಿತು)**

**(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದ ಮುಖಾಂತರ ಬೆರಳಚ್ಚು ಮಾಡಿಸಿ ಸಾಕ್ಷಿದಾರನಿಗೆ ಓದಿ ಹೇಳಲಾಯಿತು)**

ಓ.ಹೇ.ಕೇ. ಸರಿ ಇದೆ.

**ಪ್ರಧಾನ ಸಿವಿಲ್ ನ್ಯಾಯಾಧೀಶರು**
**ಹಾಗೂ ಪ್ರ.ದ.ನ್ಯಾ.ದಂಡಾಧಿಕಾರಿಗಳು, ಆನೇಕಲ್.**